P and SC No. 02/2017

PW 01 (ಶೆಟ್ಟೆಯಪ್ಪ)

ದಿನಾಂಕಃ 07.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ – ಎ ಜಿ ಪಿ ವಕೀಲರಿಂದ.

ನಾನು ಬಿ. ಎಸ್‌ಸಿ, ಬಿ.ಎಡ್, ಎಲ್‌ಎಲ್‌ಬಿ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ಅರ್ಜಿಯನ್ನು ನಾನು ವಾರಸುದಾರರ ಪ್ರಮಾಣ ಪತ್ರ ಕೋರಿ ಚನ್ನಬಸಪ್ಪನ ವಾರಸುದಾರರಾದ ನಾವುಗಳು ನಮ್ಮ ಅಣ್ಣ ಕೆಲಸ ಮಾಡುತ್ತಿದ್ದ ಕಚೇರಿಯವರ ವಿರುದ್ಧ ಸಲ್ಲಿಸಿರುತ್ತೇವೆ. 1 ನೇ ಅರ್ಜಿದಾರ ನನ್ನ ಅಣ್ಣ. 3 ಮತ್ತು 4 ನೇ ಅರ್ಜಿದಾರರು ನನ್ನ ಅಕ್ಕಂದಿರು. ನನ್ನ ತಂದೆಯ ಹೆಸರು ಚನ್ನವೀರಪ್ಪ. ನಾವು ನಮ್ಮ ತಂದೆ ತಾಯಿಗೆ ಒಟ್ಟು ಇಬ್ಬರು ಹೆಣ್ಣು ಮಕ್ಕಳು, 8 ಜನ ಗಂಡು ಮಕ್ಕಳಿದ್ದೇವೆ. ಸಾಕ್ಷಿ ಮುಂದುವರೆದು ಅರ್ಜಿಯಲ್ಲಿ 10 ಜನ ಮಕ್ಕಳು ಸಹ ಪಕ್ಷಗಾರರಲ್ಲ. 2016 ರಲ್ಲಿ ನನ್ನ ಅಣ್ಣ ಚನ್ನಬಸಪ್ಪ ಮೃತಪಟ್ಟಿದ್ದರು. 2014 ರಲ್ಲಿ ಚನ್ನಬಸಪ್ಪ ನಿವೃತ್ತಿಯಾಗಿರುತ್ತಾರೆ.

ಸರಕಾರದ ವಿರುದ್ಧ ದಾವೆ ದಾಖಲು ಮಾಡಬೇಕಾದ ನಿಯಮಗಳ ಬಗ್ಗೆ ನನಗೆ ಗೊತ್ತೇ ಎಂದರೆ ನಮ್ಮ ವಕೀಲರಿಗೆ ಗೊತ್ತು. ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ನಾನು ಕಲಂ 80 ರಡಿಯಲ್ಲಿ ಸರಕಾರದ ವಿರುದ್ಧ ನೋಟಿಸ್ ನೀಡಿ ದಾವೆ ಸಲ್ಲಿಸಬೇಕು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನಾನು ನೋಟಿಸ್ ನೀಡದೇ ದಾವೆ ದಾಖಲು ಮಾಡಿರುವುದು ನಿಯಮಬಾಹಿರ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡಿರುವುದಿಲ್ಲ. ಸೇವಾ ಪುಸ್ತಕದಲ್ಲಿ ನಾವು ನಿರ್ದೇಶನ ಮಾಡಲಾಗಿದ್ದು ನಮಗೆ ಮೃತ ಚನ್ನಬಸಪ್ಪ ಅವರ ನಿವೃತ್ತಿ ಸೇವಾ ಸೌಲಭ್ಯಗಳನ್ನು ನೀಡಬೇಕೆಂದು ಅರ್ಜಿ ಸಲ್ಲಿಸಿರುತ್ತೇವೆ. ನಾವು ಸಲ್ಲಿಸಿರುವ ಅರ್ಜಿಗೆ 1 ಮತ್ತು 4 ನೇ ಅರ್ಜಿದಾರರು ಸಮಕ್ಷಮ ಅಧಿಕಾರಿಗಳಲ್ಲ ಎಂದರೆ ಸರಿಯಲ್ಲ. ನಾನು ಸರಕಾರದವರನ್ನು ಪಕ್ಷಗಾರರನ್ನಾಗಿ ಮಾಡಬೇಕಿತ್ತು ಎಂದರೆ ಅದರ ಬಗ್ಗೆ ನಮ್ಮ ವಕೀಲರಿಗೆ ಗೊತ್ತು. ನಾನು ಸರಿಯಾದ ಪಕ್ಷಗಾರರನ್ನು ಅರ್ಜಿಯಲ್ಲಿ ಸೇರಿಸದ ಕಾರಣ ನನಗೆ ಯಾವುದೇ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

ಎದುರುದಾರರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.